## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರವಾರ ಮತ್ತು ಅಂಕೋಲ ಪಟ್ಟಣಗಳು, ಮಾರ್ಗ ಮಧ್ಯದ ಹಳ್ಳಿಗಳು ಮತ್ತು ಸೀ-ಬರ್ಡ್ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಗಂಗಾವಳಿ ನದಿಗೆ ಅಡ್ಡಲಾಗಿ ರೂ.15862 ಲಕ್ಷಗಳ ಅಂದಾಜು ವೆಚ್ಚದಲ್ಲಿ ವೆಂಟೆಡ್ ಬ್ಯಾರೇಜ್ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:

(1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರ ಸಂಖ್ಯೆ: ಕಜಮ/ ಮುಅ(ಉ)/ಆಶ್ರೇಕಾಅ(ಬೆ)/ ಉಮುಅ-1/ ತಾಸ-3/ಸಅ-5/753/2015-16 ದಿನಾಂಕ 21/07/2015.

(2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರ ಸಂಖ್ಯೆ: ಕಜಮ/ ಮುಅ(ಉ)/ಆಶ್ರೇಕಾಅ(ಬೆ)/ ಉಮುಅ-1/ ತಾಸ-3/ಸಅ-5/1682/2015-16 ದಿನಾಂಕ 07/12/2015.

(3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರ ಸಂಖ್ಯೆ: ಕಜಮ/ ಮುಅ(ಉ)/ಆಶ್ರೇಕಾಅ(ಬೆ)/ ಉಮುಅ-1/ ತಾಸ-3/ಸಅ-5/2744/2015-16 ದಿನಾಂಕ 27/03/2017.

*****

ಪ್ರಸ್ತಾವನೆ:

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರ ಮೇಲೆ ಓದಲಾದ (1) ರಿಂದ (3) ರ ಪತ್ರಗಳಲ್ಲಿ ಕಾರವಾರ ಮತ್ತು ಅಂಕೋಲ ಪಟ್ಟಣಗಳು, ಸಿ-ಬರ್ಡ್ ಪ್ರಾಜೆಕ್ಟ್ ಹಾಗೂ ಮಾರ್ಗ ಮಧ್ಯದ ಹಳ್ಳಿಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆಯಡಿಯಲ್ಲಿ ಗಂಗಾವಳಿ ನದಿ ಮೂಲದಿಂದ ಪ್ರತಿ ನಿತ್ಯ ತಲಾ 135 ಲೀಟರ್‌ನಂತೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. 2011 ನೇ ವರ್ಷದ ಜನಗಣತಿಯಂತೆ ಕಾರವಾರ ಮತ್ತು ಅಂಕೋಲ ಪಟ್ಟಣಗಳ ಜನಸಂಖ್ಯೆಯು ಕ್ರಮವಾಗಿ 63,655 & 19,109 ಗಳಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ 40.86 MLD ಸಾಮರ್ಥ್ಯದ ಈ ನೀರು ಸರಬರಾಜು ಯೋಜನೆಯನ್ನು 1975 ರಲ್ಲಿ ಚಾಲನೆಗೊಳಿಸಲಾಗಿರುತ್ತದೆ. ಗಂಗಾವಳಿ ನದಿಯು ವರ್ಷದಲ್ಲಿ 3-4 ತಿಂಗಳು ಬತ್ತಿ ಹೋಗುವುದರಿಂದ ಕಾರವಾರ ಮತ್ತು ಅಂಕೋಲ ಪಟ್ಟಣಗಳು ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿವೆ.

2) ಆದ್ದರಿಂದ, ಕಾರವಾರ ಮತ್ತು ಅಂಕೋಲ, ಮಾರ್ಗ ಮಧ್ಯದ ಹಳ್ಳಿಗಳು ಹಾಗೂ ಸೀ-ಬರ್ಡ್ ಯೋಜನೆಗಳಿಗೆ ಮುಂದಿನ 50 ವರ್ಷಗಳಿಗೆ ಅವಶ್ಯವಿರುವ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸಲು ಗಂಗಾವಳಿ ನದಿಗೆ ಅಡ್ಡಲಾಗಿ ವೆಂಟೆಡ್ ಬ್ಯಾರೇಜ್ ನಿರ್ಮಿಸಲು ರೂ.15862 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. 2068 ನೇ ವರ್ಷಕ್ಕೆ ಬೇಕಾಗುವ ಒಟ್ಟಾರೆ ನೀರಿನ ಬೇಡಿಕೆಯನ್ನು 10857.84 ದಶಲಕ್ಷ ಲೀಟರ್ ಎಂದು ಅಂದಾಜಿಸಲಾಗಿದೆ (0.383 ಟಿಎಂಸಿ 15% ಆವಿಯಿಂದಾಗುವ ನಷ್ಟ ಒಳಗೊಂಡಂತೆ).

3) ಮುಂದುವರೆದು, ಕಾರವಾರ ಮತ್ತು ಅಂಕೋಲ ಪಟ್ಟಣಗಳು ಹಾಗೂ ಮಾರ್ಗ ಮಧ್ಯದ ಹಳ್ಳಿಗಳು ಮತ್ತು ಸೀ-ಬರ್ಡ್ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಗಂಗಾವಳಿ ನದಿಗೆ ಅಡ್ಡಲಾಗಿ ರೂ.15862 ಲಕ್ಷಗಳ ಅಂದಾಜು ವೆಚ್ಚದಲ್ಲಿ ವೆಂಟೆಡ್ ಬ್ಯಾರೇಜ್ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

4) ಪ್ರಾಜೆಕ್ಟ್ ಸೀ-ಬರ್ಡ್ ಈಗಾಗಲೇ ಪ್ರಸ್ತಾವಿತ ವೆಂಟೆಡ್ ಬ್ಯಾರೇಜ್ ನಿರ್ಮಾಣಕ್ಕೆ ತನ್ನ ಪಾಲಿನ ಯೋಜನಾ ಮೊತ್ತ ರೂ.7513.33 ಲಕ್ಷಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವರ್ಗಾಯಿಸಿರುತ್ತದೆ.

5) ಸರ್ಕಾರವು ಪ್ರಸ್ತಾವನೆಯನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 36 ಯುಡಬ್ಲ್ಯೂಎಸ್ 2015</u>**
**<u>ಬೆಂಗಳೂರು, ದಿನಾಂಕ 10 ನೇ ಅಕ್ಟೋಬರ್-2017</u>**

6) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರವಾರ ಮತ್ತು ಅಂಕೋಲ ಪಟ್ಟಣಗಳು, ಮಾರ್ಗ ಮಧ್ಯದ ಹಳ್ಳಿಗಳು ಮತ್ತು ಸೀ-ಬರ್ಡ್ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಗಂಗಾವಳಿ ನದಿಗೆ ಅಡ್ಡಲಾಗಿ ರೂ.15862 ಲಕ್ಷ (ರೂಪಾಯಿ ಹದಿನೈದು ಸಾವಿರದ ಎಂಟು ನೂರ ಅರವತ್ತೆರಡು ಲಕ್ಷ ಮಾತ್ರ)ಗಳ ಅಂದಾಜು ವೆಚ್ಚದಲ್ಲಿ ವೆಂಟೆಡ್ ಬ್ಯಾರೇಜ್ ನಿರ್ಮಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

| Sl. No | Name of the components | Amount (Rs.In Lakhs) |
|---|---|---|
| 1. | Estimate for construction of vented barrage across river Gangavalli | 10297.60 |
| 2. | Add 15 % for revision of SR and Tender Premium | 1544.64 |
| 3. | Add ETP Charges @ 12% | 1421.07 |
| 4. | Add contingencies @ 3% | 355.27 |
| 5. | Add labour Cess @ 1% | 118.42 |
| 6. | Add 10% towards price adjustment for two year @ 5% per annum | 1184.22 |
| 7. | Add for third party inspection charges @ 0.5% | 59.21 |
| 8. | Add for capacity building charges @ 1.50% | 177.63 |
| 9. | Add for survey & design charges @ 1.0% | 118.42 |
| 10. | Land acquisition for construction of Vented barrage | 585.00 |
| 11. | Miscellaneous and rounding off | 0.52 |
| | **Total Rs.** | 15862.00 |

1) ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಿಯಮಾನುಸಾರ ಕೈಗೊಳ್ಳುವುದು.
2) ಕಾಮಗಾರಿಗೆ ಅಗತ್ಯವಿರುವ ಜಮೀನು ಲಭ್ಯವಿರಬೇಕು.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ಮತ್ತು ತತ್ಸಂಬಧ ಸರ್ಕಾರವು ಹೊರಡಿಸಿರುವ ಸುತ್ತೋಲೆ ಮತ್ತು ಆದೇಶಗಳಲ್ಲಿನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.
4) ಕಾಮಗಾರಿಯನ್ನು ನಿಗಧಿತ ಕಾಲಾವಧಿಯೊಳಗೆ ಪೂರ್ಣಗೊಳಿಸಬೇಕು.
5) ಕಾಮಗಾರಿಯ ವೆಚ್ಚ ಅನುಮೋದಿತ ಅಂದಾಜು ಪಟ್ಟಿಯ ವೆಚ್ಚಕ್ಕಿಂತ ಹೆಚ್ಚಾಗುವಂತಿಲ್ಲ ಮತ್ತು ಪರಿಷ್ಕರಣೆಗೆ ಅವಕಾಶ ನೀಡುವಂತಿಲ್ಲ.

7) ದಿನಾಂಕ 03/02/2011 ರ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಮಧ್ಯದ ಒಡಂಬಡಿಕೆ ಪತ್ರದಂತೆ ನೀರಿನ ಬೇಡಿಕೆಗೆ ಅನುಗುಣವಾಗಿ, ಯೋಜನೆಗೆ ಅಗತ್ಯವಿರುವ ಅನುದಾನವನ್ನು 47.37: 52.63 ರ ಅನುಪಾತದಂತೆ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಒದಗಿಸಿಕೊಳ್ಳಲು ಉದ್ದೇಶಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| | | |
|---|---|---|
| ಕರ್ನಾಟಕ ಸರ್ಕಾರ ಅನುದಾನ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. | 2292.00 |
| | ನಗರಾಭಿವೃದ್ಧಿ ಇಲಾಖೆ. | 6053.17 |
| | ಒಟ್ಟು | 8348.17 |
| ಭಾರತ ಸರ್ಕಾರ (ಸೀ-ಬರ್ಡ್ ಯೋಜನೆ) | | 7513.83 |
| | ಒಟ್ಟು | 15862.00 |

8) ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 850 ವೆಚ್ಚ-9/2015 ದಿನಾಂಕ 23/02/2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ಬೀನಾ ಕುಮಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ
(ಎಂ.ಎ-2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 50 ಪ್ರತಿಗಳನ್ನು ಈ ಕಚೇರಿಗೆ ಒದಗಿಸುವಂತೆ ಕೋರಿದೆ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಜಲಭವನ, ನಂ.5, ಬಿ.ಟಿ.ಎಂ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
7. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ (ವಿಷಯ ಸಂಖ್ಯೆ: ಸಿ 625/2017).
8. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಗೋಪುರ, ಬೆಂಗಳೂರು.
9. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ.

Assistant Executive Engineer
KUWS & D Board, Sub-Division
Karwar

**English conversion of**

Proceedings of Government of Karnataka

Subject – Regarding granting of administrative approval for construction of vented barrage across Gangavali river under combined water supply scheme to Karwar, Ankola towns, en route villages and project sea – bird.

Read :

(1) Managing Director, Karnataka urban water supply and drainage board letter no – KJM/MA(U)/ASHRKA(B)/UMA-1/TS-3/SA-5/753/2015-16 Dtd: 21/07/2015

(2) Managing Director, Karnataka urban water supply and drainage board letter no – KJM/MA(U)/ASHRKA(B)/UMA-1/TS-3/SA-5/1682/2015-16 Dtd: 07/12/2015

(3) Managing Director, Karnataka urban water supply and drainage board letter no – KJM/MA(U)/ASHRKA(B)/UMA-1/TS-3/SA-5/2744/2015-16 Dtd: 27/03/2016

Preamble;

1) As per the Managing Director, Karnataka urban water supply and drainage letters under reference (1) to (3), Karwar, Ankola towns, en route villages and project sea – bird is being supplied with 135 liters of water per person per day under combined water supply with Gangavali river as the source. The population of Karwar and Ankola towns is respectively 63,655 & 19,109 as per the 2011 census and presently working 40.86 MLD capacity water supply project was implemented in 1975. Due to drying up of Gangavali river for 3-4 months during summer Karwar and Ankola towns are facing drinking water scarcity.

2) Therefore, to fulfill the drinking water requirement for the next 50 years for Karwar -Ankola towns, en route villages and project sea – bird, the estimate has been prepared for construction of a vented barrage across Gangavali river amounting to Rs. 15862 lakhs. It is predicted 10857.84 million liters as the overall demand for the year 2068 (0.383 TMC – including evaporation losses of 15%).

3) Continued, the proposal has been submitted for administrative approval for construction of a vented barrage across Gangavali river under combined water supply scheme to Karwar, Ankola towns, en route villages and project sea – bird amounting to Rs.15862 lakhs.

4) Project Sea- Bird has already transferred its proposed share of Rs.7513.83 lakhs for vented barrage construction to Karnataka urban water supply and drainage board.

5) Considering the proposal, the government has ordered as follows.

Government order no: NAE/36/UWS/2015

Bangalore, Dtd 10 October -2017

6) In the Background of elements explained in the proposal, Government has given the administrative approval fo construction of a vented barrage across Gangavali river under combined water supply scheme to Karwar-Ankola towns, en route villages and project sea – bird subjected to the following conditions.

| Sl. No. | Name of the Components | Amount (Rs. In lakhs) |
|---|---|---|
| 1 | Estimate for construction of vented Barrage across river Gangavali | 10297.60 |
| 2 | Add 15% for Revision of SR and Market Rate Fluctuations | 1544.64 |
| 3 | Add ETP charges at 12% | 1421.07 |
| 4 | Add Contingencies at 3% | 355.27 |
| 5 | Add Labour cess at 1% | 118.42 |
| 6 | Add 10% towards Price Adjustment for two years @5% per annum | 1184.22 |
| 7 | Add to Third party inspection charges @0.5% | 59.21 |
| 8 | Add for Capacity building charges @1.50% | 177.63 |
| 9 | Add to Survey & Design charges @1.0% | 118.42 |
| 10 | Land Acquisition for Construction of Vented Barrage | 585.00 |
| 11 | Miscellaneous and rounding off | 0.52 |
| | **Total Rs.** | **15862.00** |

1) This work has to be taken up by Karnataka urban water supply and drainage board according to the regulations.

2) Land required for the work should be available.

3) Transparency Act of Karnataka Public Collections 1999, Karnataka Transparency public collections terms 2000 and other Government orders and directions to be followed.

4) Work should be completed within the scheduled duration.

5) Cost of the work shall not exceed that of estimated and a chance to revision not to be given.

6) As per MOU between Government of India and Government of Karnataka Dtd: 03/02/2011, Grants required for the work to be provided in the ratio 47.37:52.63 as below.
(Rs. In lakhs)

| | | |
|---|---|---|
| Government of Karnataka Grants | Department of Rural Development and Panchayat Raj | 2292.00 |
| | Department of Urban Development | 6053.17 |
| | Total | **8348.17** |
| Government of India (Project Sea Bird) | | 7513.83 |
| | Total | **15862.00** |

7) This order has been given based on the approval given under unofficial note of finance department no: AE 850 cost-9/2015 Dtd: 23/02/2016.

As per the orders of Governor of Karnataka

And in his name

Sd/-

Government Secretary

(M.a -2 & Board )

UD department

True Copy

Assistant Executive Engineer
KUWS & D Board, Sub-Division
Karwar